**ಓ ಎಸ್ ನಂಃ 220-15**
**ಪಿ ಡಬ್ಲ್ಯೂ ಃ 1**

**ದಿಃ 25-02-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ ಶ್ರೀ ಎ ಎಸ್ ಎಸ್ ವಕೀಲರಿಂದ**

ಉಳಿದ ವಾದಿಗಳು ಅವರ ಪರವಾಗಿ ಸಾಕ್ಷಿ ನುಡಿಸಲು ನನಗೆ ಯಾವುದೇ ಅಧಿಜಕಾರ ಪತ್ರವನ್ನು ಕೊಟ್ಟಿಲ್ಲ. ನಾವು ಪರಸ್ಪರ ಮಾತಾಡಿಕೊಂಡು ಅವರ ಪರವಾಗಿ ಸಾಕ್ಷಿ ನುಡಿಬೇಕು ಎಂದು ಉಳಿದ ವಾದಿಗಳು ನನಗೆ ಹೇಳಿದ್ದರು, ಆದರೆ ಆ ಬಗ್ಗೆ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ನಾನು ಯಶವಂತಪುರದಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ತಂದೆ ಸಹ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾರೆ. ನನ್ನ ತಂದೆಯವರ ವಾಸದ ಬಗ್ಗೆ ತೋರಿಸಲು ನಾನು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ, ನಾನು ನಾರಾಯಣಪ್ಪರವರ ಜೊತೆಗೆ ವಾಸ ಮಾಡುತ್ತಿಲ್ಲ. 5 ರಿಂದ 9ನೇ ಪ್ರತಿವಾದಿ ಕೂಡ್ಲೂರಿನಲ್ಲಿ ವಾಸ ಮಾಡುತ್ತಿದ್ದಾರೆ ಅಂರೆ ಸರಿ, ಮೃತಿ ಪಟ್ಟಿದ್ದ 1 ಮತ್ತು 2ನೇ ಪ್ರತಿವಾದಿಗಳು ಸಹ ವೋದಲು ಕೂಡ್ಲೂರಿನಲ್ಲಿ ವಾಸ ಮಾಡುತ್ತಿದ್ದರು. ಕೂಡ್ಲೂರು ಗ್ರಾಮದಲ್ಲಿರುವ ಮನೆಯಲ್ಲಿ ನಾವು ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದೇವೆ. ಕೂಡ್ಲೂರು ಗ್ರಾಮದಲ್ಲಿ ನಾವು ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದೇವೆಂದು ತೋರಿಸಲು ನಾವು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ಅದೇ ರೀತಿ ನಾವು ನಮ್ಮ ತಂದೆ ಜೊತೆಗೆ ಸಹ ವಾಸ ಮಾಡುತ್ತಿದ್ದೇವೆಂದು ತೋರಿಸಲು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ.

ನನ್ನ ತಾಯಿ ಹೆಸರು ನರಸಮ್ಮ, ನಾನು ನನ್ನ ತಾಯಿ ಮತ್ತು 1 ರಿಂದ 3ನೇ ವಾದಿಗಳು ಬೆಂಗಳೂರಿನ ಬಿ ಕೆ ನಗರ ಯಶವಂತಪುರದಲ್ಲಿ ವಾಸ ಮಾಡುತ್ತಿದ್ದೇವೆ ಅಂದರೆ ಸರಿ. ನಾವು ಒಟ್ಟಾಗಿ ನಮ್ಮ ತಂದೆ ಜೊತೆ ಯಾವತ್ತೂ ಸಹ ಕೂಡ್ಲೂರಿನಲ್ಲಿ ವಾಸ ಮಾಡಿಲ್ಲ ಅಂದರೆ ಸರಿ. ಹಾಗೂ ನಾವು ದಾವಾ ಸ್ವತ್ತಿನ ಜಂಟಿ ಸ್ವಾಧೀನದಲ್ಲಿರಲಿಲ್ಲ ಅಂದರೆ ಸರಿ. ನಾನು ಯಾವುದೇ ದಾವಾ ಸ್ವತ್ತಿನ ಜಂಟಿ ಸ್ವಾಧೀನದಲ್ಲಿ ಇರಲಿಲ್ಲ. ನನ್ನ ತಂದೆ ಅಣ್ಣ ತಮ್ಮಂದಿರು ಜಂಟಿ ಸ್ವಾಧೀನದಲ್ಲಿದ್ದಾರೆ. ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಾನು ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರು ಜಂಟಿ ಸ್ವಾಧೀನದಲ್ಲಿದ್ದಾರೆಂದು ಹೇಳಿಲ್ಲ ಅಂದರೆ ಸರಿಯಲ್ಲ.

ನಿಪಿ 1ನ್ನು ನಾನು ನೋಟರಿ ಹತ್ತಿರ ತಯಾರಿಸಿದ್ದೆ. ನಿಪಿ1 ರ ಚಾಪಾ ಕಾಗದವನ್ನು ನೆಲಮಂಗದಲ್ಲಿ ತಂದಿದ್ದೆ. ನಿಪಿ 1ರಲ್ಲಿ ಬರೆದಿರುವ ವಿಚಾರಗಳ ಮಾಹಿತಿಯನ್ನು ನಾನೇ ಕೊಟ್ಟಿದ್ದೆ. ನಿಪಿ 1ರಲ್ಲಿ

ನಮೂದಿಸಿದ ವ್ಯಕ್ತಿಗಳು ಬಿ ಕೆ ನಗರ, ಯಶವಂತಪುರದ ವಾಸಿಗಳು ಅಲ್ಲ ಅಂದರೆ ಸರಿ. ನಿಪಿ 1ನ್ನು ಕೂಡ್ಲೂರು ಗ್ರಾಮದ ರೆವಿನ್ಯೂ ಅಧಿಕಾರಿಗಳ ಮುಂದೆ ದೃಢೀಕೃತ ಪಡಿಸಿ ತಯಾರಿಸಿಲ್ಲ ಅಂದರೆ ಸರಿ. ದಾವಾ ಸ್ವತ್ತುಗಳು ವಂಶಪಾರಂಪರೆಯಿಂದ ಬಂದಿತ್ತು. ದಾವಾ ಸ್ವತ್ತುಗಳು ವಂಶಪಾರಂಪರೆಯಿಂದ ಬಂದಿದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ.

ನಿಪಿ 3 ನನ್ನ ತಾತನ ನನ್ನ ದೊಡ್ಡಪ್ಪನ ಹೆಸರಲ್ಲಿದೆ. ನನ್ನ ತಾತನಿಗೆ ನರಸಿಂಹಯ್ಯ ಉರುಫ್ ಕಾದರಯ್ಯ ಎಂದು ಕರೆತಿದ್ದರು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ, ಹಾಗೂ ಆ ರೀತಿ ನಾನು ಯಾವುದೇ ದಾಖಲೆಗಳನ್ನು ಸಹ ನೋಡಿಲ್ಲ. ನಿಪಿ3 ರ ಕಲಂ ನಂ 10ರಲ್ಲಿ ಹಕ್ಕು ಬಿಡುಗಡೆ ಪತ್ರ ಎಂದು ನಮೂದಿಸಲಾಗಿದೆ. ಆ ರೀತಿ ಹಕ್ಕು ಬಿಡುಗಡೆ ಪತ್ರವನ್ನು ನಾನು ನೋಡಿಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಅಲ್ಲ ಮತ್ತು ಒಟ್ಟು ಕುಟುಂಬದ ಆಸ್ತಿಗಳು ಸಹ ಅಲ್ಲ ಅಂದರೆ ಸರಿಯಲ್ಲ. ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಯಾವತ್ತೂ ಸಹ ಇರಲಿಲ್ಲ ಅಂದರೆ ಸರಿಯಲ್ಲ.

ನನ್ನ ಜನ್ಮ ದಿನಾಂಕಃ 11.09.1982. ನನ್ನ ತಂದೆ ತಾಯಿ ಜಗಳದಲ್ಲಿ ನಮ್ಮ ತಾಯಿ ನಮ್ಮನ್ನು ಕರೆದುಕೊಂಡು ಬೇರೆ ಹೋಗಿರುತ್ತಾರೆ. ನಾವು 15 ವರ್ಷಗಳಿಂದ ಬೇರೆ ವಾಸ ಮಾಡುತ್ತಿದ್ದೆವು. ಸುಮಾರು 25 ವರ್ಷಗಳಿಂದ ನನ್ನ ತಂದೆ ತಾಯಿ ಮತ್ತು ನಾವು ಬೇರೆ ಬೇರೆ ವಾಸ ಮಾಡುತ್ತಿದ್ದೆವು ಅಂದರೆ ಸರಿ. ನನ್ನ ತಂದೆ ತಾಯಿ ಬೇರೆ ಬೇರೆ ಆಗಿದ್ದ ಬಗ್ಗೆ ಕಾನೂನು ರೀತಿಯಲ್ಲಿ ನನ್ನ ತಾಯಿ ಮೇನ್ಟೆನೆನ್ಸ್ ಕೇಸನ್ನು ದಾಖಲಿಸಿದ್ದಾರೆ. ಸದರಿ ಪ್ರಕರಣವನ್ನು ಸುಮಾರು 98ನೇ ಇಸವಿಯಲ್ಲಿ ದಾಖಲಿಸಿದ್ದಾರೆ. ಸದರಿ ಪ್ರಕರಣದಲ್ಲಿ ಯಾರನ್ನು ಪಾಟಿ ಮಾಡಿದ್ದಾರೆಂದು ನಾನು ದಾಖಲೆಗಳನ್ನು ನೋಡಿ ಪರೀಕ್ಷಣೆ ಮಾಡಿಲ್ಲ. ನಾವು ಸದರಿ ಪ್ರಕರಣದಲ್ಲಿ ಅರ್ಜಿದಾರರು ಇದ್ದೆವು. ಸದರಿ ಪ್ರಕರಣದಲ್ಲಿ ಏನು ತೀರ್ಮಾನ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಕರಣದ ಬಗ್ಗೆ ನನ ತಾಯಿಯನ್ನು ಕೇಳಿ ತಿಳಿದುಕೊಂಡಡಾಗ ಅದು ಅಲ್ಲಿ ನಿಂತುಕೊಂಡಿದೆ ಎಂದು ತಿಳಿಸಿದ್ದರು. ಆ ಪ್ರಕರಣದ ಬಗ್ಗೆ ನಾನು ದಾಖಲೆಗಳನ್ನು ಪಡೆದುಕೊಂಡು

ಖುದ್ದಾಗಿ ಪರೀಕ್ಷಣೆ ಮಾಗಡಿಲ್ಲ.

ಸದರಿ ಕ್ರಿಮಿನಲ್ ಮಿಸ್ ಪಿಟಿಷನ್ 200 ಇಸವಿಯಲ್ಲಿ ವಜಾ ಆಗಿತ್ತು ಅಂದರೆ ನನಗೆ ಗೊತ್ತಿಲ್ಲ, ಸದರಿ ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಅಂರೆ ಸರಿಯಲ್ಲ, ನಾವು ಯಶವಂತಪುರದಲ್ಲಿ ವಾಸ ಮಾಡುತ್ತಿರುವ ಮನೆ ಬಾಡಿಗೆ ಮನೆ ಆಗಿರುತ್ತದೆ. ನಮ್ಮ ತಂದೆಯವರು ಯಶವಂತಪುರದಲ್ಲಿ ನಮಗೆ ಒಂದು ಸ್ವಂತ ಮನೆಯನ್ನು ಕೊಟ್ಟಿದ್ದರು ಅಂದರೆ ಸರಿ. ನನ್ನ ತಂದೆ ಮತ್ತು ತಾಯಿ ಬೇರೆ ಆದ ನಂತರ ನಾವು ಅದೇ ಮನೆಯಲ್ಲಿ

ವಾಸ ಮಾಡುತ್ತಿದ್ದೆವು ಅಂದರೆ ಸರಿ. ಸದರಿ ಮನೆಯನ್ನು ಮಾರಾಟ ಮಾಡಿದ್ದಾರೆ. ಸದರಿ ಮನೆಯನ್ನು ನನ್ನ ತಂದೆ ತಾಯಿ ಇಬ್ಬರೂ ಸೇರಿ ಮಾರಾಟ ಮಾಡಿದ್ದಾರೆ. 2004-05 ಇಸವಿಯಲ್ಲಿ ಮನೆಯನ್ನು ಮಾರಾಟ ಮಾಡಿದ್ದರು. ನನ್ನ ತಂದೆ ತಾಯಿ ಜಂಟಿಯಾಗಿ ಸದರಿ ಮನೆಯನ್ನು ಮಾರಾಟ ಮಾಡಿದ್ದಾರೆಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ, ಮತ್ತು ಆ ರೀತಿ ದಾಖಲೆ ಹಾಜರುಪಡಿಸಲು ಆಗುವುದಿಲ್ಲ. ನನ್ನ ತಾಯಿಯನ್ನು ವಿಚಾರಿಸಿ ಸದರಿ ಆಸ್ತಿಯ ಬಗ್ಗೆ ವಿವರವನ್ನು ಪಡೆದು ಆಸ್ತಿಯನ್ನು ಮಾರಾಟ ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಲು ಸಾಧ್ಯವಿದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆಗುವುದಿಲ್ಲ ಎಂದು ಹೇಳುತ್ತಾರೆ.

ನನ್ನ ತಾಯಿ ಪೋರ್ಜರಿ ಮಾಡಿತಿ ಸದಡಿ ಆಸ್ತಿಯನ್ನು ಮಾರಾಟ ಮಾಡಿದ ಕಾರಣ ಅವರು ಪೋರ್ಜರಿ ಮಾಡಿದ ಸತ್ಯಾಂಶ ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎಂದು ಹೇಳಿ ಸದರಿ ದಾಖಲೆ ಅನ್ನು ಹಾಜರುಪಡಿಸುತ್ತಿಲ್ಲ ಅಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**